ರಾಜ್ಯದಲ್ಲಿರುವ ಬಸ್ ಡಿಪೋಗಳು.

134(283) ಶ್ರೀ ಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಔರಾದ್) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ 6 ತಿಂಗಳುಗಳಲ್ಲಿ ಎಷ್ಟು ಬಸ್ ಡಿಪೋಗಳನ್ನು ಪ್ರಾರಂಭಿಸಲಾಗಿದೆ. (ಹೆಸರು ವಿವರಗಳನ್ನು ನೀಡುವುದು)

ಆ) ಮೇಲ್ಕಂಡ ಅವಧಿಯಲ್ಲಿ ಪ್ರಾರಂಭಿಸಲಾದ ಬಸ್ ಡಿಪೋಗಳಿಗೆ (ಪ್ರತಿಡಿಪೋಗೆ ಒದಗಿಸಲಾಗಿರುವ ಬಸ್ಸುಗಳ ಸಂಖ್ಯೆ ಎಷ್ಟು;

ಇ) ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶವಾದ ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಬಸ್ ಡಿಪೋ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಹಾಗಿದ್ದಲ್ಲಿ ಅಲ್ಲಿ ಬಸ್ ಡಿಪೋವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಕಳೆದ 6 ತಿಂಗಳುಗಳಲ್ಲಿ ಈ ಕೆಳಕಂಡ ಬಸ್ ಘಟಕಗಳನ್ನು ಪ್ರಾರಂಭಿಸಲಾಗಿದೆ.

1) ಕೋರಮಂಗಲ (ಬೆಂ.ಮ.ನ.ಸಾ)

2) ಕಿಂಕೋ (ಬೆಂ.ಮ.ನ.ಸಾ)

3) ದೊಡ್ಡಬಳ್ಳಾಪುರ

4) ಶ್ರೀನಿವಾಸಪುರ

5) ಬೆಳಗಾಂ (ಮಿನಿಘಟಕ)

6) ರಾಣೆಬೆನ್ನೂರು

7) ಬಿಜಾಪುರ 2ನೇ ಘಟಕ

8) ಗುಲ್ಬರ್ಗಾ 3ನೇ ಘಟಕ.

ಅ) ಈ ಘಟಕಗಳಿಗೆ ಒದಗಿಸಿರುವ ವಾಹನಗಳ ಸಂಖ್ಯೆ ಕೆಳಕಂಡಂತಿದೆ :

1) ಕೋರಮಂಗಲ	-	78	ವಾಹನಗಳು
2) ಕಿಂಕೋ	-	52	"
3) ದೊಡ್ಡಬಳ್ಳಾಪುರ	-	41	"
4) ಶ್ರೀನಿವಾಸಪುರ	-	46	"
5) ಬೆಳಗಾಂ (ಮಿನಿಘಟಕ)	-	26	"
6) ರಾಣೆಬೆನ್ನೂರು	-	43	"
7) ಬಿಜಾಪುರ 2ನೇ ಘಟಕ	-	18	"
8) ಗುಲ್ಬರ್ಗಾ 3ನೇ ಘಟಕ	-	73	"

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರು.

136(219) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಗ್ರಾಮಗಳ ಒಟ್ಟು ಸಂಖ್ಯೆ ಎಷ್ಟು ; ಅವುಗಳ ಪೈಕಿ ಈಗಾಗಲೇ ಸ್ಮಶಾನ ಭೂಮಿಯನ್ನು ಒದಗಿಸಲಾದ ಗ್ರಾಮಗಳ ಸಂಖ್ಯೆ ಎಷ್ಟು?

ಆ) ಉಳಿದ ಗ್ರಾಮಗಳಿಗೆ ಸ್ಮಶಾನ ಭೂಮಿಯನ್ನು ಒದಗಿಸಲು ಎಂದಿನಿಂದ ಕ್ರಮ ತೆಗೆದುಕೊಳ್ಳಲಾಗುವುದು?

ಇ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸ್ಮಶಾನಗಳ ನಿರ್ಮಾಣಕ್ಕೆ ಸ್ಥಳ ಒದಗಿಸಲಾಗಿದೆ? (ಒದಗಿಸಿದ ಭೂಮಿಯ ವಿವರ, ಸಾಧಿಸಿದ ಪ್ರಗತಿ ತಿಳಿಸುವುದು)

ಈ) ಇನ್ನು ಸ್ಥಳ ಒದಗಿಸುವಂತೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಉ) ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು?